**<u>ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು.</u>**

**<u>ಎಸ್.ಸಿ.ಸಂಖ್ಯೆಃ 33/2025</u>**

ಪಿರ್ಯಾದುದಾರರು — ಕರ್ನಾಟಕ ರಾಜ್ಯ ಸರ್ಕಾರ
ಬನ್ನೂರು ಪೋಲೀಸ್ ಠಾಣೆಯ
ಠಾಣಾಧಿಕಾರಿಯಿಂದ ಪ್ರತಿನಿಧಿಸಲ್ಪಟ್ಟಿದೆ.

: **ವಿರುದ್ಧ** :

ಆರೋಪಿತರು — ರಾಜು ಮತ್ತು ಇತರರು

**<u>: ದೋಷಾರೋಪಣೆ :</u>**

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ **ಶ್ರೀ ಡಿ.ಪುಟ್ಟಸ್ವಾಮಿ,** ನಾನು ಈ ಕೆಳಕಂಡ ಆರೋಪಿತರಾದ

1. ರಾಜು ಬಿನ್ ಭದ್ರಹೊಂಬಯ್ಯ, ವಯಸ್ಸು 62 ವರ್ಷ.
2. ನಾಗೇಂದ್ರ ಬಿನ್ ರಾಜು, ವಯಸ್ಸು 50 ವರ್ಷ.
3. ಸುರೇಶ ಬಿನ್ ಭದ್ರ ಹೊಂಬಯ್ಯ, ವಯಸ್ಸು 48 ವರ್ಷ.
4. ಗಿರೀಶ ಹೆಚ್.ಆರ್. ಬಿನ್ ರೇವಣ್ಣ, ವಯಸ್ಸು 36 ವರ್ಷ.
5. ರೇವಣ್ಣ ಬಿನ್ ಭದ್ರ ಹೊಂಬಯ್ಯ, ವಯಸ್ಸು 72 ವರ್ಷ.
6. ಪುಟ್ಟಸ್ವಾಮಿ ಬಿನ್ ಲೇಟ್. ಭದ್ರ ಹೊಂಬಯ್ಯ, ವಯಸ್ಸು 73 ವರ್ಷ.
7. ಕಿರಣ ಬಿನ್ ರೇವಣ್ಣ, ವಯಸ್ಸು 28 ವರ್ಷ.
8. ನಾಗರಾಜು ಉಃ ನಾಗರಾಜು ಹೆಚ್. ಎಮ್. ಬಿನ್ ಮಂಜು ಉಃ ಕರಿಯ, ವಯಸ್ಸು 18 ವರ್ಷ.
9. ರಮೇಶ ಬಿನ್ ಹೊಂಬೇಗೌಡ,ವಯಸ್ಸು 45 ವರ್ಷ.
10. ಶಿಲ್ಪ ಕೋಂ ಸುರೇಶ, ವಯಸ್ಸು 36 ವರ್ಷ.

11. ರಂಜನ್ ಗೌಡ ಅಃ ರಾಜು ಬಿನ್ ಸುರೇಶ, ವಯಸ್ಸು 18 ವರ್ಷ.

12. ಜೀವನ್ ಹೆಚ್. ಎಸ್ ಬಿನ್ ಸುರೇಶ, ವಯಸ್ಸು 20 ವರ್ಷ.

ಎಲ್ಲರೂ ವಾಸಃ ಹನುಮನಾಳು ಗ್ರಾಮ, ಬನ್ನೂರು ಹೋಬಳಿ, ಟಿ. ನರಸಿಪುರ ತಾಲ್ಲೂಕು, ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ **ದೋಷಾರೋಪಣೆ** ಏನೆಂದರೆಃ

ದಿನಾಂಕ 10.04.2024 ರಂದು ಮಧ್ಯಾಹ್ನ 12.00 ಗಂಟೆಯ ಸಮಯದಲ್ಲಿ ಚಾಸಾ-2 ರಘು ಅಃ ರಾಘವೇಂದ್ರರವರು 9 ನೇ ಆರೋಪಿಯಾದ ನಿಮ್ಮ ಹತ್ತಿರ ಯುಗಾದಿ ವರ್ಷದವೊಡಕು ಸಲುವಾಗಿ ಮಾಂಸಕ್ಕೆ ಹೆಸರು ಬರೆಸಿದಂತೆ, ಮಾಂಸ ಕೇಳಲು ಹೋಗಿದ್ದ ಸಮಯದಲ್ಲಿ, ಮಾಂಸ ನೀಡದೆ ಇದ್ದಾಗ, ಪುನಃ ಮಾಂಸದ ಬಗ್ಗೆ ಕೇಳಿದಾಗ, 1 ರಿಂದ 3, 11 ಮತ್ತು 12 ನೇ ಆರೋಪಿಗಳಾದ ನೀವುಗಳು ಏಕೋದ್ದೇಶದಿಂದ ಚಾಸಾ-2 ರವರ ಜೊತೆ ಜಗಳ ತೆಗೆದು, ಅವಾಚ್ಯ ಶಬ್ದಗಳಿಂದ ಬೈದ್ದು, ಸದರಿ ದಿನ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಮತ್ತೆ 1 ರಿಂದ 3, 11 ಮತ್ತು 12 ನೇ ಆರೋಪಿಗಳಾದ ನೀವುಗಳು ಚಾಸಾ-2 ರವರ ಮನೆ ಹತ್ತಿರ ಬಂದು, ಮಾಂಸ ಇಲ್ಲ ಎಂದರೆ ಮತ್ತೆ ಮತ್ತೆ ಕೇಳುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ 149** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಎರಡನೆಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳಗಳಲ್ಲಿ, 1 ರಿಂದ 3, 11 ಮತ್ತು 12 ನೇ ಆರೋಪಿಗಳಾದ ನೀವುಗಳು ಏಕೋದ್ದೇಶದಿಂದ ಚಾಸಾ-2 ರವರ ಜೊತೆ ಜಗಳ ತೆಗೆದು, ಕೈಗಳಿಂದ ಚಾಸಾ-2 ರವರ ಮೇಲೆ ಹಲ್ಲೆ ಮಾಡಿದ್ದು, ಸದರಿ ದಿನ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಮತ್ತೆ 1 ರಿಂದ 3, 11 ಮತ್ತು 12 ನೇ ಆರೋಪಿಗಳಾದ ನೀವುಗಳು ಚಾಸಾ-2 ರವರ ಮನೆ ಹತ್ತಿರ ಬಂದು, ಕಲ್ಲಿನಿಂದ ಮತ್ತು ಗಾರೆ ಚೂರಿನಿಂದ ಚಾಸಾ-2 ರವರ ಮನೆ ಬಾಗಿಲಿಗೆ ಹೊಡೆದಿದ್ದು, ಚಾಸಾ-2 ರವರು ಮನೆಯಿಂದ ಹೊರಕ್ಕೆ ಬಂದಾಗ, ಅವರ ಕತ್ತಿನ ಪಟ್ಟಿ ಹಿಡಿದು ಎಳೆದಾಡಿ ಕೈಗಳಿಂದ ಹಲ್ಲೆ ಮಾಡಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ**

**ಸಂಹಿತೆ ಕಲಂ 323 ಸಹವಾಚಕ 149** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಮೂರನೆಯದಾಗಿ, ದಿನಾಂಕ 11.04.2024 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಮೃತ ಕೃಷ್ಣ ರವರು ಚಾಸಾ-3 ರಿಂದ ಚಾಸಾ-7 ರವರುಗಳೊಂದಿಗೆ ಮಾಂಸದ ವಿಚಾರವಾಗಿ, ಚಾಸಾ-2 ರವರ ಮೇಲೆ ಗಲಾಟೆ ಮಾಡಿದ ಬಗ್ಗೆ ಕೇಳಲು, 2 ನೇ ಆರೋಪಿಯಾದ ನಿಮ್ಮ ವಠಾರಕ್ಕೆ ಬಂದು, 2 ನೇ ಆರೋಪಿಯನ್ನು ಕೇಳಿದಾಗ, 1 ರಿಂದ 12 ನೇ ಆರೋಪಿತರಾದ ನೀವು, ದೊಂಬಿ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ ಸಂಹಿತೆ ಕಲಂ 143 ಹಾಗೂ 147 ಸಹವಾಚಕ 149** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ನಾಲ್ಕನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 12 ನೇ ಆರೋಪಿತರಾದ ನೀವು ದೊಂಬಿ ಮಾಡುವ ಏಕೋದ್ದೇಶದಿಂದ, 1, 2, 5, 6 ಮತ್ತು 7 ನೇ ಆರೋಪಿತರಾದ ನೀವು ನಿಮ್ಮ ಕೈಗಳಲ್ಲಿ ಮರದ ದೊಣ್ಣೆಗಳನ್ನು, 3 ನೇ ಆರೋಪಿತನಾದ ನೀವು ಮರದ ರೀಪೀಸ್ ಪಟ್ಟಿಯನ್ನು, 8 ನೇ ಆರೋಪಿತನಾದ ನೀವು ಸೌದೆ ಸೀಳನ್ನು ಹಾಗೂ 1 ನೇ ಆರೋಪಿತನಾದ ನೀವು ಕಬ್ಬಿಣದ ರಾಡನ್ನು ಹಿಡಿದುಕೊಂಡಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ ಸಂಹಿತೆ ಕಲಂ 144 ಸಹವಾಚಕ 149** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಐದನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 12 ನೇ ಆರೋಪಿತರಾದ ನೀವು ದೊಂಬಿ ಮಾಡುವ ಏಕೋದ್ದೇಶದಿಂದ ನಿಮ್ಮ ಕೈಗಳಲ್ಲಿ ಮಾರಕಾಸ್ತ್ರಗಳನ್ನು ಹಿಡಿದು ದೊಂಬಿ ಮಾಡಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ ಸಂಹಿತೆ ಕಲಂ 148 ಸಹವಾಚಕ 149** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಆರನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 11 ಮತ್ತು 12 ನೇ ಆರೋಪಿತರಾದ ನೀವು ಏಕೋದ್ದೇಶದಿಂದ ಮೃತ ಕೃಷ್ಣ ಮತ್ತು ಚಾಸಾ-3 ರಿಂದ 7 ರವರನ್ನು ಅವಾಚ್ಯ ಶಬ್ದಗಳಿಂದ ಬೈದ್ದು, ಅವಮಾನ ಮಾಡಿ, ಅವರು ಶಾಂತಿ ಭಂಗ ಮಾಡುವಂತೆ

ಉದ್ರೇಕಿಸಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ ಸಂಹಿತೆ ಕಲಂ 504 ಸಹವಾಚಕ 149ರ** ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಏಳನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 3 ನೇ ಆರೋಪಿತರಾದ ನೀವು ಏಕೋದ್ದೇಶದಿಂದ, ನಿಮ್ಮ ಕೈಯಲ್ಲಿದ್ದ ದೊಣ್ಣೆ ಮತ್ತು ರಿಪೀಸ್ ಪಟ್ಟಿಯಿಂದ ಕೃಷ್ಣರವರ ತಲೆಗೆ ಹೊಡೆದಿದ್ದು, ಮೃತ ಕೃಷ್ಣರವರನ್ನು ಬಿಡಿಸಲು ಹೋದ ಚಾಸಾ–3 ರವರಿಗೆ ಅವರ ಹಣೆ ಹಾಗೂ ಹೊಟ್ಟೆ ಭಾಗಕ್ಕೆ ಹೊಡೆದಿದ್ದು, ಈ ಕೃತ್ಯದಿಂದಾಗಿ ಚಾಸಾ–**3** ರವರ ಸಾವು ಸಂಭವಿಸಿದರೆ, ನೀವು ಕೊಲೆ ಅಪರಾಧದ ತಪ್ಪಿತಸ್ಥರಾಗುವಿರೆಂದು ಗೊತ್ತಿದ್ದರು, ಆತನ ಕೊಲೆಗೆ ಪ್ರಯತ್ನಿಸಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ ಸಂಹಿತೆ ಕಲಂ 307 ಸಹವಾಚಕ 149** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಎಂಟನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಮೃತ ಕೃಷ್ಣರವರನ್ನು ಬಿಡಿಸಲು ಹೋದ ಚಾಸಾ–3 ರವರಿಗೆ, 1 ರಿಂದ 3 ನೇ ಆರೋಪಿತರಾದ ನೀವು ಏಕೊದ್ದೇಶದಿಂದ ದೊಣ್ಣೆ ಮತ್ತು ರಿಪೀಸ್ ಪಟ್ಟಿಯಿಂದ ಹಣೆ ಮತ್ತು ಹೊಟ್ಟೆಯ ಭಾಗಕ್ಕೆ ಹೊಡೆದಿದ್ದು, ಹಾಗೂ ಚಾಸಾ–3 ರವರನ್ನು ಬಿಡಿಸಿಕೊಳ್ಳಲು ಹೋದ ಚಾಸಾ–4 ಮತ್ತು 5 ರವರಿಗೆ, 5 ರಿಂದ 9 ನೇ ಆರೋಪಿತರಾದ ನೀವು ಮರದ ದೊಣ್ಣೆಗಳಿಂದ ಹಾಗೂ 10 ನೇ ಆರೋಪಿಯಾದ ನೀವು ಕಬ್ಬಿಣದ ರಾಡಿನಿಂದ, ಮೈಮೇಲೆ ಮತ್ತು ತಲೆಯ ಹಿಂಭಾಗಕ್ಕೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ ಸಂಹಿತೆ ಕಲಂ 324 ಸಹವಾಚಕ 34** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಒಂಭತ್ತನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 3 ನೇ ಆರೋಪಿತರಾದ ನೀವು ಏಕೋದ್ದೇಶದಿಂದ, ನಿಮ್ಮ ಕೈಯಲ್ಲಿದ್ದ ದೊಣ್ಣೆಯಿಂದ ಹಾಗೂ ರಿಪೀಸ್ ಪಟ್ಟಿಯಿಂದ ಕೃಷ್ಣರವರ ತಲೆಗೆ ಹಾಗೂ ಎಡಭಾಗದ ಕಣ್ಣಿನ ಮೇಲೆ ಬಲವಾಗಿ ಹೊಡದಿದ್ದು, ಹೊಡೆದ ರಭಸಕ್ಕೆ ಕೃಷ್ಣ ರವರು ಮೃತ ಪಟ್ಟಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ ಸಂಹಿತೆ ಕಲಂ 302 ಸಹವಾಚಕ 149** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ

ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, ಎಲ್ಲಾ ಆರೋಪಿತರಾದ ನೀವು ಏಕೋದ್ದೇಶದಿಂದ ಚಾಸಾ–3 ರಿಂದ 7 ರವರುಗಳಿಗೆ ನಿಮ್ಮನ್ನು ಮುಂದೆ ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿದ್ದು, ಈ ಮೂಲಕ ಎಲ್ಲಾ ಆರೋಪಿತರು **ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ 149** ರ ಅಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪಗಳಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

**(ಶ್ರೀ ಡಿ.ಪುಟ್ಟಸ್ವಾಮಿ)**

ದಿನಾಂಕಃ 27.01.2026

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.